(೮) ಬೈಂದೂರಿನಲ್ಲಿ ನಾಡ ಕಚೇರಿಗಳಿಗೆ ಅಧಿಕಾರಿಗಳನ್ನು ನೇಮಿಸುವುದು'

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೇ,

''ನಾಡಿಗೆ ಸ್ವಾತಂತ್ರ್ಯ ಬಂದ ದಿನ, ಈ ವರ್ಷ
ಬೈಂದೂರಿನಲ್ಲಿ ಜನಕ್ಕೆಲ್ಲ ಹರ್ಷ
ಕಾರಣ, ಕಂದಾಯ ಇಲಾಖೆ ತೆರೆದ ನಾಡ ಕಛೇರಿ
ಅದಕೆನ್ನೂ ಬಂದಿಲ್ಲ ಬೇಕಾದ ಅಧಿಕಾರಿ
ಇದರಿಂದ ಜನಕ್ಕೆಲ್ಲ ಇಂದಿಗೂ ಕಿರಿಕಿರಿ
ನಿಯಮ ಷಿಳಿರಂತೆ ನನ್ನ ಪ್ರಶ್ನೆ ಇದು ಜನರ ಎದೆಯಾಳದ ನೋವಿನ
ಪ್ರಶ್ನೆ ಎಂದಾಗುವುದು ಸರಕಾರದಿಂದ ನೇಮಕ ಆರಂಭವಾಗಲಿಕೆ ನಾಡಕಛೇರಿಯ ಕಾಯಕ ?

ಎಂದಾಗುವುದು ಸರ್ಕಾರದಿಂದ ನೇಮಕ ಎಲ್ಲ ನಾಡಕಛೇರಿಗಳ ಕಾಯಕ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಡ ಕಛೇರಿಗಳನ್ನು ಹೊಸದಾಗಿ ಪ್ರಾರಂಭ ಮಾಡಿದ್ದೇವೆ. ತಾವು ಹೇಳಿದ ಹಾಗೆ ಇನ್ನೂ ಅಧಿಕಾರಿಗಳು ಬರಲಿಲ್ಲ. ಕೂಡಲೇ ಅಧಿಕಾರಿಗಳನ್ನು ನೇಮಿಸುತಕ್ಕ ವ್ಯವಸ್ಥೆ ಮಾಡುತ್ತೇವೆ.

(೯) ರಾಷ್ಟ್ರಧ್ವಜ ಆರೋಹಣ ಮಾಡುವಾಗ ಜನತಾ ಪ್ರತಿನಿಧಿಗಳನ್ನು ಆಹ್ವಾನಿಸುವುದು

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ರಾಜ್ಯದಲ್ಲಿ ರಾಷ್ಟ್ರೀಯ ಉತ್ಸವದ ಸಂದರ್ಭಗಳಲ್ಲಿ ರಾಷ್ಟ್ರಧ್ವಜ ಆರೋಹಣ ಮಾಡುವ ಗೌರವಯುತ ಅವಕಾಶವನ್ನು ಸರಕಾರಿ ಅಧಿಕಾರಿಗಳೇ ಬಳಸಿಕೊಳ್ಳುತ್ತಿದ್ದು ಜನತೆಯ ಪ್ರತಿನಿಧಿಗಳಾದ ಲೋಕಸಭಾ ಮತ್ತು ಶಾಸನಸಭಾ ಸದಸ್ಯರುಗಳು ಈ ಸಮಾರಂಭಗಳಲ್ಲಿ ಮೂಕ ಪ್ರೇಕ್ಷಕರಾಗಿ ಭಾಗವಹಿಸಬೇಕಾಗಿದೆ. ಇದರಿಂದ ಜನತೆಯ ದೃಷ್ಟಿಯಲ್ಲಿ ಸಾರ್ವಭೌಮರಾದ ದೇಶದ ಜನತೆಯು ಆಯ್ಕೆ ಮಾಡಿರುವ ಜನತಾ ಪ್ರತಿನಿಧಿಗಳ ಸ್ಥಾನಮಾನ ಸರಕಾರಿ ಸಂಬಳ ಪಡೆಯುವ ನೌಕರರಿಗಿಂತ ಕಮ್ಮಿ ಎನ್ನುವ ಭಾವನೆಗೆ ಎಡೆಕೊಡುತ್ತದೆ. ಪ್ರಜಾಪ್ರಭುತ್ವದಲ್ಲಿ ಜನತೆಯ ಸಾರ್ವಭೌಮತ್ವ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಈ ಪದ್ಧತಿಯನ್ನು ತಪ್ಪಿಸಿ ಜನತಾ ಪ್ರತಿನಿಧಿಗಳಾದವರು ಅವರವರ ವ್ಯಾಪ್ತಿಯಲ್ಲಿ ಮಂತ್ರಿಗಳು, ಲೋಕಸಭಾ ಸದಸ್ಯರು, ಶಾಸನಸಭಾ ಸದಸ್ಯರುಗಳಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಸರಕಾರ ಈ ದಿಸೆಯಲ್ಲಿ ತಾವು ಕೈಗೊಳ್ಳುವ ಭರವಸೆ ಕೊಡಬೇಕೆಂದೂ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಸಭೆಗೆ ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಈ ಉತ್ತರವನ್ನು ಸನ್ಮಾನ್ಯ ಸದಸ್ಯರುಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ರಾಷ್ಟ್ರದ ಧ್ವಜವನ್ನು ಆರೋಹಣ ಮಾಡುವ ಬಗ್ಗೆ ಪಾಲಿಸಬೇಕಾದ ನಿಯಮಗಳನ್ನು ಭಾರತ ಸರ್ಕಾರವು ರೂಪಿಸಿದೆ ಮತ್ತು ಅದನ್ನು ಭಾರತ ಸರ್ಕಾರದ ಒಳಾಡಳಿತ ಸಚವಾಲಯದಲ್ಲಿ ಹೊರಡಿಸಿರುವ ಭಾರತದ ಫ್ಲ್ಯಾಗ್ ಕೋಡ್‌ನಲ್ಲಿ ಸೇರಿಸಲಾಗಿದೆ. ಧಾರ್ಮಿಕ ಪರಂಪರೆಯಂತೆ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ಹಿರಿಯ ಸರ್ಕಾರಿ ಪ್ರತಿನಿಧಿಗಳು ಎಂದರೆ ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಂಪುಟದ ಸಚಿವರು, ಆಯುಕ್ತರುಗಳು, ಜಿಲ್ಲಾಧಿಕಾರಿಗಳು ಪಂದನೆಗಳನ್ನು ಸ್ವೀಕರಿಸುವಂತೆ ಭಾರತ ಸರ್ಕಾರವು ಶಿಳುವಳಿಕೆ ನೀಡಿದೆ. ಆದುದರಿಂದ ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರುಗಳು ಹಿರಿಯ ಪ್ರತಿನಿಧಿಗಳಾದುದರಿಂದ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳಲ್ಲಿ ಅವರು ರಾಷ್ಟ್ರಧ್ವಜ ಆರೋಹಣ ಮಾಡಿ ವಂದನೆಯನ್ನು ಸ್ವೀಕರಿಸಬಹುದು.

ಅಧ್ಯಕ್ಷರು.—ಈಗ ಅವರು ಏನು ಮಾಡಬೇಕೆಂದು ಕೇಳುತ್ತಿದ್ದಾರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಕೇಂದ್ರ ಸರ್ಕಾರದ ಫ್ಲ್ಯಾಗ್ ಕೋಡ್ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೇವೆ. ಇದರಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ.